ಕನ್ನಡಪ್ರಭ
ಭಾನುವಾರ 12.8.2018

# ಕೆಎಂಸಿಗೆ ಡಾ. ನವೀನ್ ಸಾಲಿನ್ಸ್ ನಿಯೋಜನೆ

**ಮಣಿಪಾಲ:** ಇಲ್ಲಿನ ಕೆಎಂಸಿಯ ಶಿರಡಿ ಸಾಯಿಬಾಬಾ ಕ್ಯಾನ್ಸರ್ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಪ್ರಶಾಮಕ ಔಷಧಿ (ಪಾಲಿಯೇಟಿವ್ ಮೆಡಿಸಿನ್) ವಿಭಾಗದ ಮುಖ್ಯಸ್ಥರು ಮತ್ತು ಪ್ರಾಧ್ಯಾಪಕರಾಗಿ ಡಾ. ನವೀನ್ ಸಾಲಿನ್ಸ್ ನಿಯೋಜಿತರಾಗಿದ್ದಾರೆ.

ಡಾ. ಸಾಲಿನ್ಸ್ ಅವರು ಆಸ್ಪತ್ರೆಗೆ ಸೇರ್ಪಡೆಯಾಗುವುದರೊಂದಿಗೆ ಇಲ್ಲಿ ಇತ್ತೀಚೆಗೆ ಪ್ರಾರಂಭಿಸಲಾಗಿರುವ ಆಧುನಿಕ ಲೀನಿಯರ್ ಆಕ್ಸಿಲರೇಟರ್ ಮೂಲಕ ಸ್ಟಿರಿಯೊಟ್ಯಾಕ್ಟಿಕ್ ರೇಡಿಯೊಸರ್ಜರಿ ವಿಭಾಗದಿಂದ ಪರಿಪೂರ್ಣ ಸೇವೆ ಲಭಿಸಲಿದೆ ಎಂದು ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ.

ಡಾ. ಸಾಲಿನ್ಸ್ ಅವರು ಮುಂಬೈಯ ಟಾಟಾ ಮೆಮೋರಿಯಲ್ ಸೆಂಟರಿನಲ್ಲಿ ಪಾಲಿಯೇಟಿವ್ ಮೆಡಿಸಿನ್ ವಿಭಾಗದ ಸಹಪ್ರಾಧ್ಯಾಪಕರಾಗಿದ್ದರು. ಆಸ್ಟ್ರೇಲಿಯಾದ ಲೈಲ್ ಮ್ಯಾಕ್ವಿನ್ ಆಸ್ಪತ್ರೆಯಲ್ಲಿಯೂ ಕಾರ್ಯನಿರ್ವಹಿಸಿದ್ದಾರೆ. ಭಾರತದ ವೈದ್ಯಕೀಯ ಮಂಡಳಿಯ ಪರಿಣಿತ ಗುಂಪಿನ ಸದಸ್ಯರು, ಇಂಡಿಯನ್ ಜರ್ನಲ್ ಆಫ್ ಪಾಲಿಯೇಟಿವ್ ಕೇರ್, ಇಪಿಇಸಿ ಇಂಡಿಯಾ ಪ್ರೋಗ್ರಾಂನ ನಿರ್ದೇಶಕರಾಗಿದ್ದಾರೆ. ಇಂಗ್ಲೆಂಡ್‌ನ ಸ್ಕೂಲ್ ಆಫ್ ಮೆಡಿಸಿನ್, ಕಾರ್ಡಿಫ್ ಯುನಿವರ್ಸಿಟಿಯಲ್ಲಿ ಶಿಕ್ಷಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಅವರು ಮಂಗಳೂರಿನ ಕೆಎಂಸಿಯಲ್ಲಿ ಎಂಬಿಬಿಎಸ್ ಮತ್ತು ಮಣಿಪಾಲ ಕೆಎಂಸಿಯಿಂದ ಎಂಡಿ ಪದವಿ ಪಡೆದಿದ್ದಾರೆ.

12-8-2018



ಕೆಎಂಸಿ ಶಿರಡಿ ಸಾಯಿಬಾಬಾ ಕ್ಯಾನ್ಸರ್ ಆಸ್ಪತ್ರೆ

# ಪಾಲಿಯೇಟಿವ್ ಮೆಡಿಸಿನ್ ವಿಭಾಗ ಮುಖ್ಯಸ್ಥರಾಗಿ ಡಾ| ನವೀನ್ ಸಾಲಿನ್ಸ್

ಉಡುಪಿ, ಆ. 11: ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆ ಸಂಕೀರ್ಣದಲ್ಲಿರುವ ಶಿರಡಿ ಸಾಯಿಬಾಬಾ ಕ್ಯಾನ್ಸರ್ ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರದ ಪಾಲಿಯೇಟಿವ್ ಮೆಡಿಸಿನ್ (ಪ್ರಶಾಮಕ) ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥರಾಗಿ ಡಾ| ನವೀನ್ ಸಾಲಿನ್ಸ್ ನಿಯುಕ್ತಿಗೊಂಡಿದ್ದಾರೆ.

ಡಾ| ಸಾಲಿನ್ಸ್ ಅವರು ಮುಂಬಯಿಯ ಟಾಟಾ ಮೆಮೋರಿಯಲ್ ಸೆಂಟರ್‌ನ ಪಾಲಿಯೇಟಿವ್ ಮೆಡಿಸಿನ್ ವಿಭಾಗದಲ್ಲಿ ಐದು ವರ್ಷಗಳ ಕಾಲ ಸಹ ಪ್ರಾಧ್ಯಾಪಕರಾಗಿ, ಆಸ್ಟ್ರೇಲಿಯಾದ ಲೈಲ್ ಮ್ಯಾಕ್ವಿನ್ ಆಸ್ಪತ್ರೆಯ ಪ್ರಶಾಮಕ ವೈದ್ಯಕೀಯ ವಿಭಾಗದಲ್ಲಿ ಮೂರು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಪಾಲಿಯೇಟಿವ್ ಮೆಡಿಸಿನ್‌ನಲ್ಲಿ ಕ್ಲಿನಿಕಲ್ ಫೆಲೋಶಿಪ್ ಪೂರ್ಣಗೊಳಿಸಿದ್ದಾರೆ.

ಡಾ| ಸಾಲಿನ್ಸ್ ಅವರ ಸೇರ್ಪಡೆಯಿಂದ ಪೂರ್ಣ ಪ್ರಮಾಣದ ಪ್ರಶಾಮಕ ಸೇವೆಗಳನ್ನು ಒದಗಿಸಲು ಸಾಧ್ಯವಾಗಲಿದೆ. ಕ್ಯಾನ್ಸರ್, ಹೃದಯ ಸ್ತಂಭನ, ಶ್ವಾಸಕೋಶದ ಕಾಯಿಲೆ, ಮೂತ್ರಪಿಂಡ ಕಾಯಿಲೆ ಚಿಕಿತ್ಸೆ ನೀಡುವಲ್ಲಿ ಪ್ರಶಾಮಕ ಸೇವೆ ಮಹತ್ವದ ಪಾತ್ರ ವಹಿಸುತ್ತದೆ ಎಂದು ಕೆಎಂಸಿ ವೈದ್ಯಕೀಯ ಅಧೀಕ್ಷಕ ಡಾ| ಅವಿನಾಶ್ ಶೆಟ್ಟಿ ತಿಳಿಸಿದ್ದಾರೆ.